**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1130/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಪುನೀತ್ | ಪ್ರಾಸಾ-2 |
| ತಂದೆಯ ಹೆಸರು | : ಮುದ್ದಯ್ಯ | ಚಾಸಾ-3 |
| ವಯಸ್ಸು | : 40 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಹೆಚ್.ಸಿ-9665 | ದಿನಾಂಕಃ01.07.2024. |
| ವಾಸಸ್ಥಳ | : ಚಾಮರಾಜಪೇಟೆ ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಪರಿಚಯ ಇದೆ. ಅವರು ನಮ್ಮ ಠಾಣೆಯ ಪಿ.ಎಸ್.ಐ. ಚಾಸಾ-1 ರವರ ಪರಿಚಯ ಇಲ್ಲ. ಆದರೆ ಅವರು ನಮ್ಮ ವಾಹನಕ್ಕೆ ಅಪಘಾತಪಡಿಸಿದ್ದಾರೆ.

ನಾನು ಕಳೆದ 17 ವರ್ಷಗಳಿಂದ ಪೋಲಿಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಚಾಮರಾಜಪೇಟೆ ಪೋಲಿಸ್ ಠಾಣೆಯ ಕ್ರೈಂ.ನಂ.146/2022 ಮತ್ತು 147/2022 ಪ್ರಕರಣದ ಆರೋಪಿತರ ಪತ್ತೆಗಾಗಿ ದಿ.02 ಅಥಾವಾ 03.03.2023 ರಂದು ಆರೋಪಿ, ನಾನು ಮತ್ತು ನಮ್ಮ ಠಾಣೆಯ ಸಿಬ್ಬಂದಿಗಳಾದ ವಿಜಯ್ ಮತ್ತು ಕಾರ್ತಿಕ್ ರವರು ಎರಡು ವಾಹನಗಳಲ್ಲಿ ಮಂಗಳೂರಿಗೆ ಹೋಗಿ ಅಲ್ಲಿ ಒಂದು ವಾಹನವನ್ನು ಸದರಿ ಪ್ರಕರಣದ ಪೈಕಿ ಓರ್ವ ಆರೋಪಿಯನ್ನು ಪತ್ತೆ ಮಾಡಿ ಒಂದು ವಾಹನದಲ್ಲಿ ಬೆಂಗಳೂರಿಗೆ ಕಳುಹಿಸಿ ನಂತರ ಮತ್ತೊಬ್ಬ ಆರೋಪಿಗೆ ನೋಟೀಸು ಜಾರಿ ಮಾಡಿ ನಾನು ಮತ್ತು ಈ ಪ್ರಕರಣದ ಆರೋಪಿ ದಿ.05.03.2023 ರಂದು KA-01-MS-4319 ಡಸ್ಟರ್ ಕಾರಿನಲ್ಲಿ ಮಂಗಳೂರಿನಿಂದ ಬೆಂಗಳೂರಿಗೆ ಬರುವಾಗ ಸ.4.00 ರಿಂದ 4.30 ರ ಸಮಯಕ್ಕೆ ಮೂಡಿಗೆರೆ ತಾಲ್ಲೂಕಿನಲ್ಲಿ ಬರುತ್ತಿರುವಾಗ ಎದುರಿನಿಂದ ನೀಲಿ ಬಣ್ಣದ ಬೆನ್ಸ್ ಕಾರಿನ ಚಾಲಕ ಎದುರಿನಿಂದ ಬಂದು ನಮ್ಮ ಕಾರಿಗೆ ಡಿಕ್ಕಿಪಡಿಸಿರುತ್ತಾರೆ. ಅಪಘಾತದಿಂದ ನಮ್ಮ ವಾಹನ ಜಖಂ ಆಗಿದೆ. ಆನಂತರ ಮೂಡಿಗೆರೆ ಪೋಲಿಸ್ ಠಾಣೆಗೆ ಹೋಗಿ ನಂತರ ಬಣಕಲ್ ಪೋಲಿಸ್ ಠಾಣೆಗೆ ಹೋಗಿ ಅಪಘಾತದ ಬಗ್ಗೆ ಮಾಹಿತಿ ನೀಡಿರುತ್ತೇವೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ.ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ದಿ.05.03.2023 ರಂದು ನಾನು ಮತ್ತು ಆರೋಪಿ ಮಂಗಳೂರಿನಿಂದ ಬೆಂಗಳೂರಿಗೆ ಬರುವಾಗ ಆರೋಪಿಯು ಕಾರು ಚಾಲನೆ ಮಾಡುತ್ತಿದ್ದರು ಎಂದರೆ ಸರಿ. ಆಗ ನಾನು ಕಾರಿನ ಹಿಂಬದಿ ಸೀಟಿನಲ್ಲಿ ಕುಳಿತಿದ್ದೆ ಎಂದರೆ ಸರಿಯಲ್ಲ. ಆದರೆ ಚಾಲಕನ ಪಕ್ಕದ ಸೀಟ್ ನಲ್ಲಿ ಕುಳಿತಿದ್ದೆ. ಆರೋಪಿಯೇ ತನ್ನ ಕಾರನ್ನು ಅತೀವೇಗ ಮತ್ತು ಅಜಾಗರುಕತೆಯಿಂದ ಚಾಲನೆ ಮಾಡಿ ಚಾರ್ಮುಡಿ ಘಾಟಿಯ ಅಣ್ಣಪ್ಪ ದೇವಸ್ಥಾನದ 2 ಕಿ.ಮೀ. ಹಿಂದೆ ರಸ್ತೆ ತಿರುವಿನಲ್ಲಿ ಸಂಜೆ ಸಮಾರು 4.30 ಕ್ಕೆ ಎದುರಿನಿಂದ ಬರುತ್ತಿದ್ದ KA-01-MM-7129

ಬೆನ್ಸ್ ಕಾರಿಗೆ ಡಿಕ್ಕಿಪಡಿಸಿದ್ದಾರೆ ಎಂದರೆ ಸರಿಯಲ್ಲ. ಈ ಕಾರಣ ಬೆನ್ಸ್ ಕಾರಿಗೆ ಸಂಪೂರ್ಣ ಜಖಂಗೊಂಡಿತ್ತು ಹಾಗೂ ಅದನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ಚಾಸಾ-1 ಮತ್ತು ಆರೋಪಿಯ ನಡುವೆ ಮಾತುಕತೆಯಾದ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ-2 ರವರು ಸಹಾ ಬಂದಿದ್ದರು ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದಲೇ ಅಪಘಾತವಾಗಿದೆ ಎಂದು ಈ ಪ್ರಕರಣ ದಾಖಲಾಗಿದೆ ಎಂದು ನನಗೆ ಗೊತ್ತು ಎಂದರೆ ಸರಿಯಲ್ಲ.

ಈಗ ಓದಿ ಹೇಳಿದಂತೆ ದಿ.13.03.2023 ರಂದು ಬಣಕಲ್ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-10 ಎಂದು ಗುರುತಿಸಲಾಯಿತು. ಆರೋಪಿಯು ನನ್ನ ಮೇಲಾಧಿಕಾರಿಯಾಗಿರುವ ಕಾರಣ ಅವರಿಗೆ ಶಿಕ್ಷೆಯಾಗುತ್ತದೆ ಎಂದು ಪ್ರಕರಣದ ಬಗ್ಗೆ ಸಂಪೂರ್ಣ ವಿಚಾರ ಗೊತ್ತಿದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1130/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಪುನೀತ್ | ಪ್ರಾಸಾ-1 |
| ತಂದೆಯ ಹೆಸರು | : ಪರಮಶಿವಮೂರ್ತಿ | ಚಾಸಾ-1 |
| ವಯಸ್ಸು | : 32 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯಾಪಾರ | ದಿನಾಂಕಃ01.07.2024. |
| ವಾಸಸ್ಥಳ | : ಬೆಂಗಳೂರು | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಪರಿಚಯ ಇದೆ. ನನ್ನ ಕಾರಿಗೆ ಅಪಘಾತವಾದ ಸಮಯಕ್ಕೆ ನಾನು ಅವರನ್ನು ನೋಡಿದ್ದೇನೆ. ಚಾಸಾ-2 ರಿಂದ 8 ರವರ ಪರಿಚಯ ನನಗಿಲ್ಲ.

ದಿ.05.03.2022 ರಂದು ಸಂಜೆ ಸಮಾರು 4.00 ರಿಂದ 4.30 ರ ಸಮಯಕ್ಕೆ ನಾನು ನನ್ನ ಸ್ನೇಹಿತನ ತಾಯಿಯ ಹೆಸರಿನಲ್ಲಿರುವ KA-01-MM-7129 ಬೆನ್ಸ್ ಕಾರನ್ನು ಚಾಲನೆ ಮಾಡಿಕೊಂಡು ಬೆಂಗಳೂರಿನಿಂದ ಮಂಗಳೂರಿಗೆ ಹೋಗುವ ಮಾರ್ಗ ಮಧ್ಯ ಚಾರ್ಮುಡಿ ಘಾಟ್ ಅಣ್ಣಪ್ಪಸ್ವಾಮಿ ದೇವಸ್ಥಾನದ ಮುಂದೆ ತಿರುವಿನ ರಸ್ತೆಯ ಎಡಬದಿಯಲ್ಲಿ ಹೋಗುತ್ತಿರುವಾಗ ಎದುರುಬದಿಯಿಂದ KA-01-MS-4319 ಡಸ್ಟರ್ ಕಾರಿನ ಚಾಲಕ ತಿರುವು ಇರುವುದು ಗೊತ್ತಿದ್ದರೂ ಸಹಾ ಅಜಾಗರುಕತೆ ಮತ್ತು ಅತೀವೇಗದಿಂದ ಚಾಲನೆ ಮಾಡಿಕೊಂಡು ಬಂದು ನಾನು ಚಾಲನೆ ಮಾಡುತ್ತಿದ್ದ ಕಾರಿಗೆ ಡಿಕ್ಕಿಪಡಿಸಿರುತ್ತಾರೆ. ನಂತರ ನಾನು ಕಾರಿನಿಂದ ಇಳಿದು ಡಸ್ಟರ್ ಕಾರಿನ ಚಾಲಕರಾದ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯ ಬಳಿ ಅಪಘಾತದ ಬಗ್ಗೆ ಕೇಳಿದಾಗ ಅವರು ಮದ್ಯಪಾನ ಮಾಡಿರುವುದು ತಿಳಿದಿರುತ್ತದೆ ಹಾಗೂ ಆ ಸಮಯಕ್ಕೆ ಒಂದು ಸ್ಕಾರ್ಪಿಯೋ ಕಾರು ಬಂದಿದ್ದು ಅದರಲ್ಲಿ ಚಾಸಾ-2 ರವರು ಇದ್ದು ಅಪಘಾತವನ್ನು ನೋಡಿರುತ್ತಾರೆ ಹಾಗೂ ಅವರು ನನ್ನೊಂದಿಗೆ ಪೋಲಿಸ್ ಠಾಣೆಗೆ ಬಂದು ದೂರು ಕೊಡುವಾಗಲೂ ಸಹಾ ಜೊತೆಗಿದ್ದರು.

ಅಪಘಾತವಾದ ಸ್ಥಳದಲ್ಲಿ ಆರೋಪಿಯು 5 ನಿಮಿಷಗಳ ಕಾಲ ಇದ್ದು ಆನಂತರ ಸ್ಥಳದಿಂದ ಪರಾರಿಯಾಗಿರುತ್ತಾರೆ. ನಂತರ ಅದೇದಿನ ರಾತ್ರಿ ಸಮಾರು 9.00 ರಿಂದ 9.30 ರ ಸಮಯಕ್ಕೆ ಬಣಕಲ್ ಪೋಲಿಸ್ ಠಾಣೆಗೆ ಹೋಗಿ ಅಪಘಾತದ ಬಗ್ಗೆ ದೂರು ದಾಖಲಿಸಿರುತ್ತೇನೆ. ಮರುದಿನ ಬೆ.12.30 ರ ಸಮಯಕ್ಕೆ ಪೋಲಿಸರು ನನ್ನನ್ನು ಅಪಘಾತ ಸ್ಥಳಕ್ಕೆ ಕರೆದು ಅಲ್ಲಿ ಮಹಜರ್ ಕ್ರಮ ಜರುಗಿಸಿ ಸ್ಥಳದ ನಕ್ಷೆ ಮತ್ತು ಫೋಟೋ ತೆಗೆಸಿರುತ್ತಾರೆ. ನಂತರ ಮದ್ಯಾಹ್ನ 3.30 ರಿಂದ 4.00 ರ ಸಮಯಕ್ಕೆ ಠಾಣಾ ಆವರಣದಲ್ಲಿ ಇದ್ದ ಆರೋಪಿಯ ಕಾರು ಮತ್ತು ನಾನು ಚಾಲನೆ ಮಾಡುತ್ತಿದ್ದ ಕಾರನ್ನು ವಶಕ್ಕೆ ಪಡೆದಿರುತ್ತಾರೆ. ಆ ಸಮಯಕ್ಕೆ ಚಾಸಾ-4 ಮತ್ತು 5 ರವರು ಇದ್ದರು.

ಸಾಕ್ಷಿಯು ದಿ.05.03.2023 ರ ದೂರು, ಪ್ರ.ವ.ವರದಿ, ಸ್ಥಳ ಮಹಜರ್ ಮತ್ತು ಅಮಾನತ್ತು ಮಹಜರ್ ಗಳಲ್ಲಿ ತಮ್ಮ ಸಹಿಗಳನ್ನು ಗುರುತಿಸಿ ಮೂರು ಭಾವಚಿತ್ರಗಳನ್ನು ನೋಡಿ ಅವುಗಳನ್ನು ಸ್ಥಳ ಮತ್ತು ಅಮಾನತ್ತು ಮಹಜರ್ ಗಳ ಕಾಲದಲ್ಲಿ ತೆಗೆಯಲಾಗಿದೆ ಎಂದು ಗುರುತಿಸುತ್ತಾರೆ. ದೂರನ್ನು ನಿಪಿ-1, ಪ್ರ.ವ.ವರದಿಯನ್ನು ನಿಪಿ-2, ಸ್ಥಳ ಮಹಜರ್ ನ್ನು ನಿಪಿ-3 ಮತ್ತು ಅಮಾನತ್ತು ಮಹಜರ್ ನ್ನು ನಿಪಿ-4, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ 4(ಎ), ಫೋಟೋಗಳನ್ನು ಸಿಡಿ ಮತ್ತು ಪ್ರಮಾಣಪತ್ರದೊಂದಿಗೆ ನಿಪಿ-5 ರಿಂದ 9 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-6 ಮತ್ತು 7 ರಲ್ಲಿ ಕಾಣುವ ವಾಹನಗಳನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಆರೋಪಿಯನ್ನು ಸಹಾ ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ವಿ.ಜೆ ವಕೀಲರಿಂದಃ**

ನಾನು ಹೇಳಿದ ದಿನಾಂಕದಂದು ಬೆಂಗಳೂರಿನಿಂದ ಬೆ.10.30 ರ ಸಮಯಕ್ಕೆ ಹೊರಟೆವು. ನಾನು ಚಾಲನೆ ಮಾಡುತ್ತಿದ್ದ ಕಾರಿನಲ್ಲಿ ನಾನೊಬ್ಬನೇ ಇದ್ದೆ. ನಾನು ಆ ದಿನ ಚಾಲನೆ ಮಾಡುತ್ತಿದ್ದ ಕಾರು ನನಗೆ ಸೇರಿದ್ದಲ್ಲ ಎಂದರೆ ಸರಿ. ನಾನು ನನ್ನ ಕೆಲಸದ ನಿಮಿತ್ತ ನನ್ನ ಸ್ನೇಹಿತನ ಕಾರನ್ನು ಪಡೆದು ಮಂಗಳೂರಿಗೆ ಹೋಗುತ್ತಿದ್ದೆ ಎಂದರೆ ಸರಿ. ನಾನು ಹೇಳಿದ ದಿನಾಂಕದಂದು ನಾನು ಚಾಲನೆ ಮಾಡುತ್ತಿದ್ದ ವಾಹನಕ್ಕೆ ವಿಮಾ ಇರಲಿಲ್ಲ. ಆ ದಿನಕ್ಕೆ ವಿಮಾ ಅವಧಿ ಮುಗಿದು 1 ½ ಯಿಂದ 2 ತಿಂಗಳು ಆಗಿತ್ತು. ಈ ವಿಚಾರ ನನಗೆ ಮೇಲೆ ಹೇಳಿದ ದಿನಾಂಕದಂದು ತಿಳಿದಿರಲಿಲ್ಲ. ನನ್ನ ಸ್ನೇಹಿತನೂ ಸಹಾ ಈ ವಿಚಾರವನ್ನು ಹೇಳಿರಲಿಲ್ಲ.

ನಾನು ಸಮಾರು 10-12 ವರ್ಷಗಳಿಂದ ವಾಹನ ಚಾಲನೆ ಮಾಡುತ್ತಿದ್ದೇನೆ. ಬೆಂಗಳೂರಿನಿಂದ ಮಂಗಳೂರಿನ ನನ್ನ ಕೆಲಸದ ಸ್ಥಳದ ಮಾರ್ಗದಲ್ಲಿ ಸಮಾರು 15-20 ಪೋಲಿಸ್ ಠಾಣೆಗಳು ಸಿಗುತ್ತವೆ ಎಂದರೆ ಸರಿ. ವಾಹದ ಚಾಲನೆ ಮಾಡುವಾಗ ವಾಹನಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳು ಹಾಗೂ ಚಾಲನ ಪರವಾನಗೆ ಜೊತೆಯಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ ಎಂದರೆ ಸರಿ. ಕೊಟ್ಟಿಗೆಹಾರದಿಂದ ಉಜಿರೆಗೆ ಹೋಗುವಾಗ ಚಾರ್ಮುಡಿ ಘಾಟ್ ರಸ್ತೆ ಇಳಿಮುಖವಾಗಿರುತ್ತದೆ ಎಂದರೆ ಸರಿ. ಆ ರಸ್ತೆ ಒಂಟಿ ರಸ್ತೆಯಾಗಿದ್ದು ಪ್ರತೀ 100 ಮೀಟರ್ ಗೆ ತಿರುವುಗಳು ಇವೆ ಎಂದರೆ ಸರಿ. ಅಣ್ಣಪ್ಪ ದೇವಸ್ಥಾನದಿಂದ ಸುಮಾರು 1 ½-2 ಕಿ.ಮೀ. ದೂರದಲ್ಲಿ ಅಪಘಾತವಾಯಿತು. ಅಪಘಾತವಾಗಿದೆ ಎಂದು ಹೇಳಲಾದ ಸ್ಥಳದ ನಿಖರವಾದ ಹೆಸರು ನನಗೆ ಗೊತ್ತಿಲ್ಲ.

ಅಪಘಾತವಾಗಿದೆ ಎಂದು ಹೇಳಲಾದ ಸ್ಥಳದ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಆದರೆ ಎರಡು ಬದಿಯಲ್ಲಿ ರಸ್ತೆ, ಒಂದು ಕಡೆ ಬೆಟ್ಟ ಮತ್ತೊಂದು ಕಡೆ ರಸ್ತೆಯ ಕಾಂಪೌಂಡ್ ಇತ್ತು. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ನಾನು ನನ್ನ ದೂರನ್ನು ನನ್ನ ಕೈಬರವಣಿಗೆಯಲ್ಲಿ ಬರೆದಿಲ್ಲ ಆದರೆ ಟೈಪ್

ಮಾಡಿಸಿದ್ದೇನೆ. ನನ್ನ ದೂರಿನಲ್ಲಿ ಅದನ್ನು ನಾನು ಹೇಳಿ ಬರೆಸಿದಂತೆ ಟೈಪ್ ಮಾಡಿ, ಓದಿ ನೋಡಿದ ನಂತರ ಸಹಿ ಮಾಡಿರುವುದಾಗಿ ಅದರಲ್ಲಿ ನಮೂದು ಇದೆ. ಈ ವಿಷಯ ನಿಪಿ-1 ರಲ್ಲಿ ಬರೆದಿಲ್ಲ ಎಂದರೆ ಸರಿ. ಎಷ್ಟು ಪುಟದ ದೂರನ್ನು ಕೊಟ್ಟಿದ್ದೇನೆ ಎಂದು ಈಗ ನನಗೆ ನೆನಪಿಲ್ಲ. ದೂರಿನ ಪ್ರತಿ ಪುಟಕ್ಕೂ ಸಹಿ ಮಾಡಿದ್ದೀನ ಎಂದು ಈಗ ನನಗೆ ನೆನಪಿಲ್ಲ. ಮಹಜರ್ ಎಷ್ಟು ಪುಟದಲ್ಲಿ ಇದೆ ಎಂದು ನನಗೆ ನೆನಪಿಲ್ಲ. ನಾನು ಮಹಜರ್ ನ ಪ್ರತೀ ಪುಟಕ್ಕೂ ಸಹಿ ಮಾಡಿಲ್ಲ. ಮಹಜರ್ ನಲ್ಲಿ ಮೊ.ಸಂ. ಬರೆಯಲಾಗಿತ್ತ ಎಂದು ನನಗೆ ನೆನಪಿಲ್ಲ. ಮಹಜರ್ ಗೆ ನನ್ನೊಂದಿಗೆ ಇನ್ನೂ ಎಷ್ಟು ಜನ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಸ್ಥಳದಲ್ಲಿ ತಯಾರಿಸಿದ ನಕ್ಷೆಗೆ ನಾನು ಸಹಿ ಮಾಡಿದ್ದೇನೆ. ನಿಪಿ-3 ರಲ್ಲಿನ ನಕಾಶೆಯ ಮೇಲೆ ನನ್ನ ಸಹಿ ಇಲ್ಲ ಎಂದರೆ ಸರಿ. ಮಹಜರ್ ನ್ನು ಬರೆದವರ ಹೆಸರು ನನಗೆ ನೆನಪಿಲ್ಲ. ಮಹಜರ್ ಕಾಲಕ್ಕೆ ನಾನು ಯಾರನ್ನೂ ಕರೆದುಕೊಂಡು ಹೋಗಿರಲಿಲ್ಲ. ನಾನು ಚಾಲನೆ ಮಾಡುತ್ತಿದ್ದ ಕಾರು ಸಮಾರು 10-15 ಲಕ್ಷ ಹಣದ ಖರ್ಚಿನಷ್ಟು ಜಖಂ ಆಗಿತ್ತು. ವಿಮಾ ಇಲ್ಲದ ವಾಹನಕ್ಕೆ ಅಪಘಾತವಾದರೆ ವಿಮಾ ಕಂಪೆನಿಯಿಂದ ಪರಿಹಾರ ಬರುವುದಿಲ್ಲ ಎಂದರೆ ಸರಿ. ನಾನು ಹೇಳಿದ ದಿನಾಂಕದಂದು ನಾನೇ ನನ್ನ ವಾಹನವನ್ನು ಅತೀವೇಗ ಮತ್ತು ಅಜಾಗರುಕತೆಯಿಂದ ಚಾಲನೆ ಮಾಡಿ ಅಪಘಾತಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಕಾರಿಗೆ ವಿಮಾ ಇಲ್ಲದ ಕಾರಣ ನಾನೇ ಅಪಘಾತಪಡಿಸಿದರು ಸಹಾ ಆರೋಪಿ ಅಪಘಾತಪಡಿಸಿದ್ದಾರೆ ಎಂದು ವಿಮಾ ಪರಿಹಾರಕ್ಕೋಸ್ಕರ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹೇಳಿದಂತೆ ಅಪಘಾತ ಸ್ಥಳದಲ್ಲಿ ಚಾಸಾ-2 ರವರು ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳದಲ್ಲಿಯೇ ನನ್ನ ವಾಹನವನ್ನು ಬಿಟ್ಟು ನಾನು ಠಾಣೆಗೆ ಹೋಗಿ ದೂರು ನೀಡಿದ್ದೇನೆ. ಸ್ಥಳ ಮಹಜರ್ ಕಾಲದಲ್ಲಿ ವಾಹನಗಳು ಇರಲಿಲ್ಲ. ಆ ಸ್ಥಳದಲ್ಲಿ ಟೈಯರ್ ಮಾರ್ಕ್ ಗಳನ್ನು ಗುರುತು ಮಾಡಿರುವ ಬಗ್ಗೆ ನನಗೆ ನೆನಪಿಲ್ಲ. ಅಪಘಾತ ಸ್ಥಳದಲ್ಲಿ ಪೋಲಿಸರು ಏನನ್ನಾದರೂ ವಶಪಡಿಸಿಕೊಂಡರ ಎಂದು ನನಗೆ ನೆನಪಿಲ್ಲ. ಅಪಘಾತ ಸ್ಥಳದಲ್ಲಿ ಕಾರಿಗೆ ಜಖಂಗೊಂಡ ಸಣ್ಣಪುಟ್ಟ ವಸ್ತುಗಳು ಬಿದ್ದಿದ್ದವು. ಈ ಬಗ್ಗೆ ದೂರಿನಲ್ಲಿ ಬರೆದಿದ್ದೇನ ಎಂದು ನನಗೆ ನೆನಪಿಲ್ಲ. ನನ್ನ ಕಾರಿನ ಅಪಘಾತಕ್ಕೂ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅಪಘಾತ ಸ್ಥಳದಲ್ಲಿ ಅರೋಪಿಯೂ ನನ್ನೊಂದಿಗೆ ಮಾತನಾಡಿ ಸ್ಥಳದಿಂದ ಹೋದರು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

ಕಡೂರು ತಾಲ್ಲೂಕಿನ ಎಂ.ಎಲ್.ಎ ಬೆಳ್ಳಿಪ್ರಕಾಶ್ ರವರ ಪರಿಚಯ ಇದೆಯಾ ಎಂದರೆ ಸಾಕ್ಷಿಯು ಅವರು ಎಂ.ಎಲ್.ಎ ಎಂದು ಮಾತ್ರ ಗೊತ್ತು ಎಂದು ನುಡಿಯುತ್ತಾರೆ. ನಾನು ಕಡೂರು ತಾಲ್ಲೂಕಿನ ಖಾಯಂ ವಾಸಿ ಎಂದರೆ ಸರಿ. ಎಂ.ಎಲ್.ಎ ಪ್ರಭಾವ ಬೀರಿ ಆರೋಪಿಯ ವಿರುದ್ದ ಸುಳ್ಳು ದೂರು

ದಾಖಲಪಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.